(ಗೊಂದಲ)

ಅಧ್ಯಕ್ಷರು:- ನಾನು ಕೇಳುವುದಿಲ್ಲ. ನೀವು ಹೇಳುವುದನ್ನು ನಾನು ಬೇಕಾದಷ್ಟು ಸಾರಿ ಕೇಳಿದ್ದೇನೆ.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್:- ಸ್ವಲ್ಪ ತಾಪು ಕೇಳಿ ಸ್ವಾಮಿ.

ಅಧ್ಯಕ್ಷರು:- ದಯವಿಟ್ಟು ತಾವುಗಳೆಲ್ಲರೂ ಕುಳಿತುಕೊಳ್ಳಬೇಕು. ಆರ್ಡರ್, ಆರ್ಡರ್.

(ಗೊಂದಲ)

ಅಧ್ಯಕ್ಷರು:- ಈಗ ಮಾನ್ಯ ವಾಟಾಳ್ ನಾಗರಾಜ್‌ರವರು ಹೇಳಿದ್ದು, ವಿರೋಧಪಕ್ಷದ ಉಪನಾಯಕರು ಹೇಳಿದ್ದು ಎಲ್ಲವನ್ನು ಕೇಳಿದ್ದೇನೆ. ಇದು ಬಹಳ ಗಹನವಾದ ವಿಚಾರಗಳನ್ನು ಒಳಗೊಂಡಿರತಕ್ಕ ಪ್ರಶ್ನೆ. ಆದ್ದರಿಂದ ನಾನು ಸುಲಭವಾಗಿ ಒಂದು ರೂಲಿಂಗ್ ಕೊಡುವುದಕ್ಕೆ ಆಗುವುದಿಲ್ಲ. ಇದನ್ನೆಲ್ಲಾ ಅಧ್ಯಯನ ಮಾಡಿ ಅನಂತರ ರೂಲಿಂಗ್ ಕೊಡುತ್ತೇನೆ. ನೀವು ಹೇಳತಕ್ಕ ಎಲ್ಲ ವಿಚಾರಗಳನ್ನು ಗಮನದಲ್ಲಿಟ್ಟುಕೊಳ್ಳುತ್ತೇನೆ. ಪತ್ರಿಕೆಗಳಲ್ಲಿ ಬಂದಿರತಕ್ಕ ವಿಚಾರದಿಂದ ನಿಮಗೆ ಬಹಳ ನೋವು ಉಂಟುಮಾಡಿದೆ ಎಂಬುದನ್ನು ನಾನು ಬಲ್ಲೆ, ಅದರಲ್ಲಿ ನಾನು ಸಹಭಾಗಿಯಾಗಿದ್ದೇನೆ. ನಿಮ್ಮ ಆನಿಸಿಕೆಗೆ ನಾನು ಸಹ ಭಾಗಿಯಾಗಿದ್ದೇನೆ. ಆದ್ದರಿಂದ ನಾನು ರೂಲಿಂಗ್ ಕೊಡುತ್ತೇನೆ

ಅಧ್ಯಕ್ಷರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲಾದ ವಿಷಯ:

ಶ್ರೀ ಡಿ.ಬಿ. ಚಂದ್ರೇಗೌಡ:- ಮಾನ್ಯ ಅಧ್ಯಕ್ಷರೆ, ನಾನೊಂದು ನೋಟೀಸ್ ಕೊಟ್ಟು ತಮ್ಮ ಅನುಮತಿಯನ್ನು ಕೇಳೀದ್ದೇನೆ. "ಠಾಣೆಯಲ್ಲಿ ಸಾವು" ತುಮಕೂರು ಪೋಲೀಸ್ ಲಾಕ್ ಅಪ್‌ನಲ್ಲಿ ಆದ ಸಾವಿನ ಬಗ್ಗೆ. ತುಮಕೂರಿನ ಠಾಣೆಯಲ್ಲಿ ಸಾವು ಆಗಿದೆ ಎನ್ನತಕ್ಕ ವಿಚಾರ ಪ್ರಜಾಪ್ರಗತಿ ಎನ್ನತಕ್ಕ ಪತ್ರಿಕೆಯಲ್ಲಿ ವರದಿಯಾಗಿದೆ. ತಾವು ಬೇಕಾದರೆ ಇಲ್ಲವೆಂದು ಹೇಳಿ. ನನ್ನ ಹತ್ತಿರ ಕೆಲವರು ಬಂದಿದ್ದರು. ಆಲ್ಲಿ ಏನಾಗಿದೆ ಅಂದರೆ ನರಸಿಂಹರಾಜ ಅಲಿಯಾಸ್ ರಾಜ ಎಂಬುವರನ್ನು ಪೋಲೀಸರು 8ನೇ ತಾರೀಖು ಬಂಧಿಸಿಕೊಂಡುಹೋಗಿದ್ದರು. 13ನೇ ತಾರೀಖೂ ಆವನನ್ನು ಠಾಣೆಯಲ್ಲಿ ಕ್ವೆಸ್ ರೂಮ್‌ಗೆ ಕರೆದುಕೊಂಡು ಹೋಗಿ ಬರೀ ಸಾವು ಅಷ್ಟೇ ಅಲ್ಲ; ಆಂಧ್ರದ ಪ್ರದೇಶದ ಒಂದು ವ್ಯಾಪ್ತಿಯಲ್ಲಿ ತೆಗೆದುಕೊಂಡು ಹೋಗಿ ಈ ಶವವನ್ನು ಸುಟ್ಟಿದ್ದಾರೆಂದು ಅಲ್ಲಿ ಸಾಕಷ್ಟು ಪ್ರಚಾರವಾಗಿದೆ. ತಾವೇ ಹೇಳುವುದಾದರೆ, ನಾನು ಎವರಕ್ಕೆ ಹೋಗುವುದಿಲ್ಲ. ಈ ಸುದ್ದಿ ನಿಜವೆ? ಈ ಸುದ್ದಿ ನಿಜವೇ ಹಾಗಿದ್ದರೆ ಪೋಲೀಸ್ ಇಲಾಖೆಯವರು ಏನು ಮಾಡುತ್ತಾರೆ? ಅಧಿಕಾರಿಗಳು ಏನು ಮಾಡುತ್ತಾ ಇದ್ದಾರೆ? ಪತ್ರಿಕೆಯಲ್ಲಿ ಕೂಡ ಬರದಹಾಗೆ ಅದನ್ನು ತಡೆಹಿಡಿಟ್ಟಿದ್ದಾರೆಂದು ನಿನ್ನೆ ದಿವಸ ಈ ದಿವಸ ಬಂದಿದ್ದ ಸಾರ್ವಜನಿಕರು ಹೇಳಿದ್ದಾರೆ. ಇದಕ್ಕೆ ಪೂರ್ವಭಾವಿಯಾಗಿ 8ನೇ ತಾರೀಖೂ ತಿಲಕ್‌ನಗರದ ಪೋಲೀಸ್‌ನವರು ನರಸಿಂಹರಾಜ್‌ನನ್ನು ಬಂಧಿಸಿದರು. ಆವನು 10-11ನೇ ತಾರೀಖುವರೆಗೆ ಕಾಣದೇ ಇರುವುದನ್ನು ನೋಡಿ ಜುಲೈ 11ನೇ ತಾರೀಖು ಆವರ ಸೋದರ ಆಳಿಯ ಸಿ.ಜೆ.ಎಂ. ನ್ಯಾಯಾಲಯಕ್ಕೆ ಹುಡುಕಿಕೊಂಡು ಅರ್ಜಿ ಹಾಕುತ್ತಾರೆ. ಆದರೆ ಆತನನ್ನು ಹಿಡಿದುಕೊಂಡು ಹೋಗಿಲ್ಲವೆಂದು ಪೋಲೀಸ್‌ನವರಿಗೆ ಹೇಳುತ್ತಾರೆ. ಇದು ಆದಮೇಲೆ ಆವನ ಸೋದರಮಾವ 8ನೇ ತಾರೀಖು ಪೋಲೀಸ್‌ನವರು ಆವನನ್ನು ಸೈಕಲ್ ಮೇಲೆ ಕೂರಿಸಿಕೊಂಡು ಕರೆದುಕೊಂಡು ಹೋಗುತ್ತಿದ್ದುದನ್ನು ನೋಡಿದ್ದನ್ನು ಹೇಳಿದ್ದಾರೆ. ಹೀಗಾಗಿ ಪೋಲೀಸ್ ಇಲಾಖೆಯವರು ಕರೆದುಕೊಂಡು ಹೋಗುತ್ತಿದ್ದುದನ್ನು ನೇರ ಪತ್ತಿರದ ಸಂಬಂಧಿಕರು ದೂರು ಕೊಟ್ಟಿರುವುದರ ಜೊತೆಗೆ ನ್ಯಾಯಾಲಯದಲ್ಲಿ ಕೂಡ ಆದರ ಮೊಕದ್ದಮೆಯನ್ನು ಹಾಕಿ

ಕೇಳಿದ್ದಾರೆ. ಇದುವರೆಗೆ ಅದರ ಪರಿಸ್ಥಿತಿ ಏನಾಗಿದೆಯೋ ಗೊತ್ತಿಲ್ಲ. ಮಾನ್ಯ ಮುಖ್ಯಮಂತ್ರಿಗಳು ಸದನದಲ್ಲಿದ್ದಾರೆ. ಏನಾದರೂ ಇದರ ಬಗ್ಗೆ ಬೆಳಕು ಚೆಲ್ಲಬೇಕೆಂದು ನಾನು ಅವರಲ್ಲಿ ಕೇಳುತ್ತೇನೆ.

ಅಧ್ಯಕ್ಷರು:- ಅವರ ಗಮನಕ್ಕೆ ಬಂದಿಲ್ಲ; ತಿಳಿದು ಹೇಳುತ್ತಾರೆ. ನೀವು ಅದರ ಗಮನಕ್ಕೆ ತಂದಿದ್ದೀರಿ.

(2) ಬೆಳಗಾವಿ ನಗರಸಭೆ ಮೇಲೆ ಮರಾಠಿ ಧ್ವಜ ತೆಗೆಸುವುದರ ಬಗ್ಗೆ.

† ಶ್ರೀ ವಾಟಾಳ್ ನಾಗರಾಜ್:- ಮಾನ್ಯ ಅಧ್ಯಕ್ಷರೆ ನಾನು ಯಾವಾಗಲೂ ಸಭೆಯಲ್ಲಿ ಒಂದು ವಿಚಾರವನ್ನು ಹೇಳುತ್ತಿದ್ದೇನೆ. ಏನೆಂದರೆ ಬೆಳಗಾವಿ ನಗರಸಭೆಯ ಬಗ್ಗೆ ಅನೇಕ ಸಾರಿ ಹೇಳಿದ್ದೇನೆ. ಬೆಳಗಾವಿ ನಗರಸಭೆಯವರು ಏನು ನಿರ್ಣಯ ತೆಗೆದುಕೊಂಡಿದ್ದಾರೆ ಅದರ ಬಗ್ಗೆ ಸರ್ಕಾರ ಏನು ತೀರ್ಮಾನ ತೆಗೆದುಕೊಂಡಿದೆ ಎಂಬುದು ಗೊತ್ತಿಲ್ಲ. ಮತ್ತು ಬೆಳಗಾವಿ ನಗರಸಭೆಯ ಮೇಲೆ ಮರಾಠಿಧ್ವಜವನ್ನು ತೆಗೆಸುವುದರ ಬಗ್ಗೆ ಆರು ತಿಂಗಳುಗಳಿಂದ ಈ ಸಭೆ ಪ್ರಾರಂಭವಾಗುವುದಕ್ಕೆ ಮೊದಲಿನಿಂದಲೂ ಹೇಳುತ್ತಿದ್ದೇನೆ. ಮಾನ್ಯ ಸಂಸದೀಯ ಸಚಿವರು ಮೂರು ಬಾರೀ ಹೇಳಿದರು. ಎಲ್ಲರಿಗೂ ಅನ್ವಯವಾಗುವಂತೆ ಒಂದು ಕಾಯಿದೆಯನ್ನು ತರುತ್ತೇವೆ, ಆ ಕಾಯಿದೆಯನ್ನು ಈ ಸಭೆ ಮುಗಿಯುವುದರೊಳಗೆ ಅದನ್ನು ಮಂಡಿಸುತ್ತೇವೆಂದು ಹೇಳಿದರು. ಇವತ್ತು ಸಭೆ ಮುಗಿಯುತ್ತಾ ಇದೆ. ಇದುವರೆಗೆ ಏನು ತೀರ್ಮಾನವನ್ನು ಸರ್ಕಾರದಲ್ಲಿ ತೆಗೆದುಕೊಂಡಿದ್ದೀರಿ ಎಂಬುದು ಗೊತ್ತಾಗುತ್ತಿಲ್ಲ. ಆವರ ಆ ನಿರ್ಣಯದ ಬಗ್ಗೆ ಯೋಚಿಸಿದ್ದೀರಾ? ಬೆಳಗಾವಿ ನಗರಸಭೆಯ ಕಟ್ಟಡದ ಮೇಲಿರುವ ಮರಾಠಿ ಧ್ವಜವನ್ನು ತೆಗೆಸುವ ಬಗ್ಗೆ ಸರ್ಕಾರದ ನಿಲುವೇನು? ಇಲ್ಲಿ ಮುಖ್ಯಮಂತ್ರಿಗಳಿದ್ದಾರೆ. ಸಂಸದೀಯ ಸಚಿವರು ಸಹ ಇಲ್ಲಿದ್ದಾರೆ. ಇವತ್ತು ಅಧಿವೇಶನ ಮುಕ್ತಾಯವಾಗುತ್ತಿದೆ. ಅದನ್ನು ದಯಮಾಡಿ ತಿಳಿಸಬೇಕು.

ಪ್ರೊ: ಎಂ.ಡಿ. ನಂಜುಂಡಸ್ವಾಮಿ:- ಮಾನ್ಯ ಅಧ್ಯಕ್ಷರೆ, ನಾನು ಏತಕ್ಕೆ ಎದ್ದು ನಿಂತುಕೊಂಡೆ ಅಂದರೆ, ಲಾಕಪ್ ಸಾವಿನ ಬಗ್ಗೆ ಮಾನ್ಯ ಸದಸ್ಯರೊಬ್ಬರು ಹಿಂದೆ ಒಂದು ಪ್ರಶ್ನೆಯನ್ನು ಕೇಳಿದ್ದರು. ಅದನ್ನು ತಡೆಹಿಡಿಯುವುದಕ್ಕೆ ಏನಾದರೂ ಕ್ರಮ ತೆಗೆದುಕೊಂಡಿದ್ದೀರಾ ಎನ್ನುವ ಪ್ರಶ್ನೆ ಕೇಳಿದ್ದರು. ಅದಕ್ಕೆ ಉತ್ತರ ಏನು ಬಂದಿತ್ತು ಎಂದರೆ, ಸತ್ತಮೇಲೆ ಏನು ಕ್ರಮ ತೆಗೆದುಕೊಂಡಿದ್ದೇವೆ ಎಂಬ ಬಗ್ಗೆ ಸನ್ಮಾನ್ಯ ಮಂತ್ರಿಗಳು ಉತ್ತರವನ್ನು ಕೊಟ್ಟಿದ್ದರು. ನಾನು ಎದ್ದುನಿಂತಿರುವ ಉದ್ದೇಶ ಇಷ್ಟೆ. ಲಾಕಪ್‌ನಲ್ಲಿ ನಾವುಗಳು ಆಗದೇ ಇರುವ ರೀತಿಯಲ್ಲಿ ನಾನು ಕ್ರಮ ತೆಗೆದುಕೊಳ್ಳಬೇಕು. ಆದಕ್ಕೆ ನಾವು ಕ್ರಿಮಿನಲ್ ಪ್ರೊಸಿಜರ್ ಕೋಡ್‌ನ್ನು ತಿದ್ದುಪಡಿ ಮಾಡಬೇಕಾಗುತ್ತದೆ. ತಮ್ಮ ಗಮನಕ್ಕೆ ಬಂದಿರಬೇಕು, ನಾನು ಒಂದು ಖಾಸಗಿ ಮಸೂದೆಯನ್ನು ಕಳಿಸಿಕೊಟ್ಟಿದ್ದೇನೆ. ಅದು ಏನೋ ಗೊತ್ತಿಲ್ಲ, ಅದು ಈ ಅಧಿವೇಶನದಲ್ಲಿ ಬಂದಿಲ್ಲ. ಇದು ಕ್ರಿಮಿನಲ್ ಪ್ರೊಸಿಜರ್ ಕೋಡ್‌ನ ಸೆಕ್ಷನ್ 41ಕ್ಕೆ ತಿದ್ದುಪಡಿ ಆಗಬೇಕೆಂದು ನಾನು ಸಾಕಷ್ಟು ಮೊದಲೇ ನೋಟೀಸ್ ಕೊಟ್ಟು ಕಳಿಸಿದ್ದೆ. ಏಕೆಂದರೆ, ಇದು ಮೂಲಭೂತ ಹಕ್ಕಿಗೆ ಸಂಬಂಧಪಟ್ಟ ಪ್ರಶ್ನೆ.

ಅಧ್ಯಕ್ಷರು:- ಖಾಸಗಿ ನಿರ್ಣಯ?

ಪ್ರೊ: ಎಂ.ಡಿ. ನಂಜುಂಡಸ್ವಾಮಿ:- ಪ್ರೈವೇಟ್ ಬಿಲ್. ನಿರ್ಣಯ ಅಲ್ಲ. ಅದನ್ನು ಕಳಿಸಿಕೊಟ್ಟಿದ್ದೆ, ಅದು ಅಚ್ಚಾಗಿಯೂ ಬಂತು. ತಮ್ಮ ಕಚೇರಿಗೆ ಅಚ್ಚಾಗಿ ಬಂದಿದೆ. ಆದರೆ ಇಲ್ಲಿ ಸದನಕ್ಕೆ ಬರಲಿಲ್ಲ. ಇದರ ಬಗ್ಗೆ ಕಾನೂನು ಮಂತ್ರಿಗಳ ಜೊತೆಯಲ್ಲಿ ಕೂಡ ನಾನು ಮಾತನಾಡಿದ್ದೇನೆ. ಇದು ಬಹಳ ಮುಖ್ಯವಾದ ತಿದ್ದುಪಡಿ; ಇಡೀ ಇಂಡಿಯಾ ದೇಶದಲ್ಲೇ ಇದು ಆಗಬೇಕು. ಕರ್ನಾಟಕದಲ್ಲಿ ನಾವು ಇದನ್ನು ಮಾಡಬೇಕು; ಈ ತಿದ್ದುಪಡಿಯಲ್ಲಿ ಏನಿಲ್ಲ, ಈ ಲಾಕಪ್‌ನಲ್ಲಿ ಸಾವು ಆಗದೇ ಇರುವ ರೀತಿಯಲ್ಲಿ ತಡೆಯುವುದಕ್ಕೆ ಒಂದು ಸಣ್ಣ ಬದಲಾವಣೆ ಅಷ್ಟೆ. ಇಲ್ಲಿ ಮಾನ್ಯ ಮುಖ್ಯಮಂತ್ರಿಗಳು, ಪೋಲೀಸ್ ಮಂತ್ರಿಗಳು ಮತ್ತೆ ಕಾನೂನು ಮಂತ್ರಿಗಳು ಇರುವುದರಿಂದ ಇದರ ಪ್ರಾಮುಖ್ಯತೆಯ ಬಗ್ಗೆ ಹೇಳುತ್ತಿದ್ದೇನೆ. It is a simple amendment to Section 41 of the